# Press Clippings

## Annual day Celebrations-15-12-2023

ಪ್ರತಿನಿಧಿ
PAGE_06
17 Dec 2023

### ಸಾಂಸ್ಕೃತಿಕ ಪ್ರೌಢಿಮೆ ಹೊಮ್ಮಿಸುವ ವೇದಿಕೆ

**ಪ್ರತಿನಿಧಿ ವರದಿ** ಕೊಳ್ಳೇಗಾಲ

ಶಾಲಾ, ಕಾಲೇಜುಗಳು ಪ್ರತಿ ವರ್ಷ ಆಯೋಜಿಸುವ ವಾರ್ಷಿಕೋತ್ಸವ ಸಮಾರಂಭಗಳು ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರೌಢಿಮೆ ಹೊರಹೊಮ್ಮಿಸುವ ವೇದಿಕೆಯಾಗಿದೆ ಎಂದು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ನ್ಯೂನತೆ ಸಂಸ್ಥೆ ಪ್ರಾಧ್ಯಾಪಕಿ ಡಾ.ಪಿ.ಮಂಜುಳಾ ಅಭಿಪ್ರಾಯಪಟ್ಟರು.

ಶ್ರೀ ವಾಸವಿ ಸಂಯುಕ್ತ ವಿದ್ಯಾ ಸಂಸ್ಥೆ ಆವರಣದಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿ ಸಮುದಾಯಕ್ಕೆ ಶಿಕ್ಷಣ ಸಂಸ್ಥೆಗಳು ಕೇವಲ ಶೈಕ್ಷಣಿಕ ಚಟುವಟಿಕೆ ನೀಡುವುದಷ್ಟೇ ಅಲ್ಲದೇ ಸಂಸ್ಕಾರ ಮತ್ತು ಸಂಯಮ ಕಲ್ಪಿಸಿಕೊಡಬೇಕು ಎಂದು ಕರೆ ನೀಡಿದರು.

40 ವರ್ಷ ಇತಿಹಾಸ ಹೊಂದಿರುವ ಶ್ರೀ ವಾಸವಿ ವಿದ್ಯಾ ಸಂಸ್ಥೆ ಪ್ರತಿಯೊಬ್ಬ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಗುರಿ ಮುಟ್ಟಿಸುವ ಕಾರ್ಯದಲ್ಲಿ ಯಶಸ್ವಿಯಾಗಿದೆ ಎಂದು ಪ್ರಶಂಸಿಸಿದರು. ವಿದ್ಯಾರ್ಥಿ ದಶೆಯಿಂದಲೇ ಮಕ್ಕಳು ತನ್ನ ಸ್ನೇಹಿತರು ಹಾಗೂ ಸಹಪಾಠಿಗಳಿಗೆ ಸಹಾಯ ಮಾಡುವ ಒಳ್ಳೆಯ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರೀ ವಾಸವಿ ಸಂಯುಕ್ತ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ.ಪಿ.ಜಿ.ಶ್ರೀಧರ್ ಸಮಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿದರೆ, ಅಧ್ಯಕ್ಷ ಎ.ಡಿ.ಕುಮಾರಕೃಷ್ಣ ಅವರು ಸಂಸ್ಥೆ ಹಾಗೂ ವಿದ್ಯಾರ್ಥಿಗಳ ಸಾಧನೆ ಕುರಿತು ಮಾತನಾಡಿದರು. ನಂತರ ಹಲವು ವಿದ್ಯಾರ್ಥಿಗಳ ತಂಡದಿಂದ ಜನ ಮನ ಸೆಳೆಯುವ ಸಾಂಸ್ಕೃತಿ ಕಾರ್ಯಕ್ರಮಗಳು ಜರುಗಿತು.

ವಿದ್ಯಾ ಸಂಸ್ಥೆಯ ಉಪಾಧ್ಯಕ್ಷ ಪಿ.ಎನ್.ಸತ್ಯನಾರಾಯಣ, ಖಜಾಂಚಿ ಸುಮಂತ್ ವಿ.ಅಚ್ಚಮ್, ಜಂಟಿ ಕಾರ್ಯದರ್ಶಿ ಜೆ.ಎಸ್.ಚೇತನ್, ಡಾ.ಸಿ.ಪಿ.ಶರತ್, ಕೆ.ಎಸ್.ನಾಗರಾಜ ಬಾಬು, ನಿರ್ದೇಶಕ ಒ.ವಿ.ದಿವಾಕರ್, ಪಿ.ಜಿ.ಶಶಿಧರ್, ಎಂ.ಎಸ್. ಸಚೇನ್ ಕುಮಾರ್, ಆಶೀಕ್ ವಿ. ಓಲೇಟಿ, ಎಸ್.ರಾಜೇಶ್, ಎಸ್.ವೆಂಕಟೇಶ್ ಬಾಬು, ಸಂಸ್ಥೆಯ ಶಾಲಾ ಮುಖ್ಯೋಪಾಧ್ಯಾಯಿನಿ ಬಿ.ಎಸ್.ಗೀತಾ, ಪ್ರಾಂಶು ಪಾಲ ವಿ.ವಾಸವಾಂಬ, ಡಾ.ಎಸ್.ದಯಪ್ರಸಾದ್, ಜೆ.ರವಿಕುಮಾರ್ ಇದ್ದರು.



ಪ್ರಜಾವಾಣಿ

ಮೈಸೂರು ವಾಕ್ ಶ್ರವಣ ಸಂಸ್ಥೆಯ ಡಾ. ಪಿ.ಮಂಜುಳಾ

### 'ಓದಿನ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ'

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ: 'ವಿದ್ಯಾರ್ಥಿಗಳು ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು' ಎಂದು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ನ್ಯೂನತೆ ಸಂಸ್ಥೆಯ ಪ್ರಾಧ್ಯಾಪಕಿ ಡಾ.ಪಿ.ಮಂಜುಳಾ ಹೇಳಿದರು.

ನಗರದ ವಾಸವಿ ಸಂಯುಕ್ತ ವಿದ್ಯಾಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

'ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಗಳನ್ನು ಮಾಡಿ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಬೇಕು ಎಂಬುದು ಶಿಕ್ಷಕರು ಹಾಗೂ ತಂದೆ ತಾಯಿಗಳ ಕನಸಾಗಿರುತ್ತದೆ. ಹಾಗಾಗಿ ಪಾಲಕರು ಸಹ ಮಕ್ಕಳ ಬಗ್ಗೆ ಬಹಳ ಕಾಳಜಿ ವಹಿಸಬೇಕು. ಗುರುಗಳು ಅವರಿಗೆ ಉತ್ತಮ ಸಂಸ್ಕಾರ ಭರಿತ ಶಿಕ್ಷಣ ಕೊಡಬೇಕು. ಈ ದೇಶದ ಭವಿಷ್ಯ ಉಜ್ವಲವಾಗಿರಬೇಕಾದರೆ ಮುಂದಿನ ಪೀಳಿಗೆ ಸಧೃಢವಾಗಿರಬೇಕು. ಶಿಕ್ಷಕರು ಮಕ್ಕಳಿಗೆ ಪಾಠ-ಪ್ರವಚನದ ಜತೆಗೆ ಧೈರ್ಯ ತುಂಬಬೇಕು. ಜೀವನದಲ್ಲಿ ಎದುರಾಗುವ ಕಷ್ಟವನ್ನು ಹೆದರಿಸುವ ಆತ್ಮಸ್ಥೈರ್ಯವನ್ನು ಅವರಲ್ಲಿ ಹುಟ್ಟಿಸಬೇಕು' ಎಂದರು.

ನಂತರ ವಿದ್ಯಾಸಂಸ್ಥೆಯ ಅಧ್ಯಕ್ಷ ಎ.ಡಿ.ಕುಮಾರ ಕೃಷ್ಣ ಮಾತನಾಡಿ, 'ವಾಸವಿ ಸಮೂಹ ವಿದ್ಯಾಸಂಸ್ಥೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿದೆ. ಭಾರತದಲ್ಲಿ ಸರ್ವಧರ್ಮಕ್ಕೂ ಸಮಾತನೆಯಿದೆ. ಅಂತೆಯೇ, ನಮ್ಮ ಸಂಸ್ಥೆ ಸಾಮರಸ್ಯದಿಂದ ಕೂಡಿದ್ದು, ಯಾವುದೇ ಜಾತಿ, ಧರ್ಮದ ತಾರತಮ್ಯವಿಲ್ಲದೇ ಒಗ್ಗೂಡಿ ನಡೆಯುತ್ತಿದೆ' ಎಂದರು.

ಈ ವೇಳೆ 2022-23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿ ಸಂಸ್ಥೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ನಂತರ ಶಾಲಾ ಹಾಗೂ ಕಾಲೇಜು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಂಸ್ಥೆ ಉಪಾಧ್ಯಕ್ಷ ಪಿ.ಎನ್. ಸತ್ಯನಾರಾಯಣ, ಕಾರ್ಯದರ್ಶಿ ಡಾ.ಪಿ.ಜಿ.ಶ್ರೀಧರ್, ಪಿ.ಜಿ.ಶಶಿಧರ್, ಖಜಾಂಚಿ ಸುಮಂತ್ ವಿ.ಅಚ್ಚಮ್, ಜಂಟಿ ಕಾರ್ಯದರ್ಶಿ ಜೆ.ಎಸ್.ಚೇತನ್, ಕೆ.ಎಸ್ ನಾಗರಾಜು ಬಾಬು, ನಿರ್ದೇಶಕ ಓ.ವಿ ದೀವಕರ್, ರಾಮಕೃಷ್ಣ, ಡಾ.ಆಶಿಕ್ ಓಲೇಟಿ, ಎಸ್.ರಾಜೇಶ್, ಎಸ್.ವೆಂಕಟೇಶ್ ಬಾಬು, ನಟರಾಜ್ ಗುಪ್ತ, ಶಾಲೆಯ ಮುಖ್ಯ ಶಿಕ್ಷಕಿ ಗೀತಾ, ಸಿಬಿಎಸ್‌ಇ ಪ್ರಾಂಶುಪಾಲ ಡಾ.ಎಸ್. ದಯಾಪ್ರಸಾದ್, ಶ್ರೀ ವಾಸವಿ ಸಂಯುಕ್ತ ಕಾಲೇಜು ಪ್ರಾಂಶುಪಾಲೆ ವಿ.ವಾಸವಾಂಬ ಹಾಗು ಭೋದಕ ಹಾಗು ಭೋದಕೇತರ ಸಿಬ್ಬಂದಿ ಇದ್ದರು.



ಕೊಳ್ಳೇಗಾಲ ನಗರದ ಶ್ರೀ ವಾಸವಿ ಸಂಯುಕ್ತ ವಿದ್ಯಾ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭವನ್ನು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ನ್ಯೂನತೆ ಸಂಸ್ಥೆಯ ಪ್ರಾಧ್ಯಾಪಕಿ ಡಾ.ಪಿ.ಮಂಜುಳಾ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಸ್ಥೆ ಉಪಾಧ್ಯಕ್ಷ ಪಿ.ಎನ್‌.ಸತ್ಯನಾರಾಯಣ, ಕಾರ್ಯದರ್ಶಿ ಡಾ.ಪಿ.ಜಿ.ಶ್ರೀಧರ್, ಪಿ.ಜಿ.ಶಶಿಧರ್ ಪಾಲ್ಗೊಂಡಿದ್ದರು

# Kannada Rajyothsava -2023



**ರಾಜ್ಯೋತ್ಸವ:** ಕೊಳ್ಳೇಗಾಲದ ವಾಸವಿ ವಿದ್ಯಾಸಂಸ್ಥೆಯಲ್ಲಿ ಬುಧವಾರ 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡಲಾಯಿತು. ಸಂಸ್ಥೆಯ ಕಾರ್ಯದರ್ಶಿ ಡಾ. ಪಿ.ಜಿ.ಶ್ರೀಧರ್, ಡಾ.ಜಯಪ್ಪ ಹೊನ್ನಾಳಿ, ಆಡಳಿತ ಮಂಡಳಿಯ ಕಾರ್ಯದರ್ಶಿಗಳು, ಸದಸ್ಯರು, ಶಿಕ್ಷಕರು ವಿದ್ಯಾರ್ಥಿಗಳು ಹಾಜರಿದ್ದರು.

Andolana Edition
Nov 5, 2023 Page No. 1
Powered by : eReleGo.com

## Valedictory Function of Soft Skill Development Program-31-10-2023



**ಸಮಾರೋಪ:** ಕೊಳ್ಳೇಗಾಲದ ವಾಸವಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೌಶಲ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭ ನಡೆಯಿತು. ಚಾ.ನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಕಾರ್ಯಾಗಾರದ ತರಬೇತುದಾರರಾದ ಗುರುರಾಜ್, ಪವನ್ ಸುರೇಶ್, ಜ್ಯೋತಿ, ವಿನುತ ಕೆಂಪರಾಜ್, ಹಂಸ, ವಿನೋದಿನಿ, ಸಂಸ್ಥೆಯ ಕಾರ್ಯದರ್ಶಿ ಡಾ.ಪಿ.ಜಿ.ಶ್ರೀಧರ್, ಸಹ ಕಾರ್ಯದರ್ಶಿ ನಾಗರಾಜು ಬಾಬು, ಪ್ರಭಾರ ಪ್ರಾಂಶುಪಾಲರಾದ ರವಿಕುಮಾರ್, ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲರು, ಉಪನ್ಯಾಸಕರು ಹಾಜರಿದ್ದರು.

Andolana Edition
Nov 5, 2023 Page No. 1
Powered by : eReleGo.com

# Honoring the Students 2022-23 Batch

ವಿಜಯವಾಣಿ ಚಿತ್ರ



ಬಿ.ಕಾಂ.ಪದವಿ ವಿಭಾಗದ 6ನೇ ಸೆಮಿಸ್ಟರ್‌ನಲ್ಲಿ ಹೆಚ್ಚು ಅಂಕಗಳಿಸಿದ ದಿಲೀಪ್ ಸೀರ್ವಿ, ಪಿ.ರಾಧಿಕಾ, ಪ್ರಾರ್ಥನಾ, ಎಸ್.ಮೇಘನಾ, ಎನ್. ನಿವೇದಿತಾ, ಪಿ.ವಿ.ಪ್ರಣತಿ ಅವರನ್ನು ಕೊಳ್ಳೇಗಾಲದ ವಾಸವಿ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ವಾಸವಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ಪಿ.ಜಿ.ಶ್ರೀಧರ್, ಸಂಯೋಜಕಿ ಅನಿತಾ ಗಿರೀಶ್, ಸಹ ಕಾರ್ಯದರ್ಶಿ ನಾಗರಾಜು ಬಾಬು, ಪ್ರಭಾರ ಪ್ರಾಂಶುಪಾಲ ಜೆ.ರವಿಕುಮಾರ್ ಇತರರಿದ್ದರು.

## ವಾಸವಿ ಕಾಲೇಜಿಗೆ ಶೇ.95 ಫಲಿತಾಂಶ

**ವಿಕ ಸುದ್ದಿಲೋಕ** ಕೊಳ್ಳೇಗಾಲ

ಪಟ್ಟಣದ ಶ್ರೀ ವಾಸವಿ ಪ್ರಥಮ ದರ್ಜೆ ಕಾಲೇಜಿಗೆ ಬಿ.ಕಾಂ ಆರನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಶೇ. 95ರಷ್ಟು ಫಲಿತಾಂಶ ಬಂದಿದೆ.

ದಿಲೀಪ್ ಸೀರ್ವಿ 600 ಕ್ಕೆ 596 ಅಂಕಗಳನ್ನು ಪಡೆದು 4 ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿ ಪ್ರಥಮ ಸ್ಥಾನದಲ್ಲಿರುತ್ತಾರೆ. ರಾಧಿಕಾ ಪಿ. 586 ಅಂಕಗಳನ್ನು ಪಡೆದು 2 ವಿಷಯಗಳಲ್ಲಿ 100ಕ್ಕೆ100 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನದಲ್ಲಿದ್ದಾರೆ. ಪ್ರಾರ್ಥನಾ ಕೆ. ವಿ 579 ಅಂಕಗಳನ್ನು ಪಡೆದು 2 ವಿಷಯಗಳಲ್ಲಿ 100ಕ್ಕೆ100 ಅಂಕಗಳನ್ನು ಗಳಿಸಿ ತೃತೀಯ ಸ್ಥಾನದಲ್ಲಿರುತ್ತಾರೆ. ಐಡಿಟಿ-2 ವಿಷಯದಲ್ಲಿ 14 ವಿದ್ಯಾರ್ಥಿಗಳು, ಎಸಿಎಂಎ-2 ವಿಷಯದಲ್ಲಿ 10 ವಿದ್ಯಾರ್ಥಿಗಳು, ಸಿಟಿಪಿ ವಿಷಯದಲ್ಲಿ 8 ವಿದ್ಯಾರ್ಥಿಗಳು, ಪಿಪಿಎ ವಿಷಯದಲ್ಲಿ 2 ವಿದ್ಯಾರ್ಥಿಗಳು ಹಾಗೂ ಬಿಎಲ್ ವಿಷಯದಲ್ಲಿ 1 ವಿದ್ಯಾರ್ಥಿ, 100ಕ್ಕೆ100 ಅಂಕಗಳನ್ನು ಗಳಿಸಿ, ಕಾಲೇಜಿಗೆ ಕೀರ್ತಿತಂದಿರುತ್ತಾರೆ. ಸಾಧನೆಗೈದ ವಿದ್ಯಾರ್ಥಿಗಳಿಗೆ ಶ್ರೀವಾಸವಿ ವಿದ್ಯಾ ಕೇಂದ್ರದ ಅಧ್ಯಕ್ಷ ಎ.ಡಿ.ಕುಮಾರ ಕೃಷ್ಣ ಕಾರ್ಯದರ್ಶಿ ಡಾ.ಪಿ.ಜಿ. ಶ್ರೀಧರ್ ಹಾಗೂ ಸಹಕಾರ್ಯದರ್ಶಿ ನಾಗರಾಜು ಬಾಬು, ಖಜಾಂಚಿ ಸುಮಂತ್ ಅಚ್ಚಮ್ , ಪ್ರಾಂಶುಪಾಲರು ಮತ್ತು ಅಧ್ಯಾಪಕ ವೃಂದದವರು ಎಲ್ಲಾವಿದ್ಯಾರ್ಥಿವಿದ್ಯಾರ್ಥಿನಿಯರಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ದಿಲೀಪ್ ಸೀರ್ವಿ



ರಾಧಿಕಾ ಪಿ,



ಪ್ರಾರ್ಥನಾ ಕೆ.

# Shuttle Badminton Competition-22-02-2023

ಪ್ರತಿನಿಧಿ

Page-6
22 Feb 2023

## ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಸ್ಥಾನ



**ಕೊಳ್ಳೇಗಾಲ:** ನಗರದದ ಶ್ರೀ ವಾಸವಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಹರ್ಷ ಕೂಗಟಿ, ದೀಲಿಪ್ ಸೆರ್ವಿ, ರಾಮಚಂದನ್, ರಘು ಮತ್ತು ರಾಜು ಅವರು ಇತ್ತೀಚೆಗೆ ಮೈಸೂರು ವಿಶ್ವ ವಿದ್ಯಾನಿಲಯದ ಚಾಮರಾಜನಗರ ವಲಯದ ಕ್ರೀಡಾಕೂಟದ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನಗಳಿಸಿ ಅಂತರ್ ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಎಲ್ಲ ವಿದ್ಯಾರ್ಥಿಗಳನ್ನು ಶ್ರೀ ವಾಸವಿ ವಿದ್ಯಾಸಂಸ್ಥೆ ಅಧ್ಯಕ್ಷ ಎ.ಡಿ.ಕುಮಾರಕೃಷ್ಣ, ಕಾರ್ಯದರ್ಶಿ ಡಾ.ಪಿ.ಜಿ. ಶ್ರೀಧರ್, ಸಹ ಕಾರ್ಯದರ್ಶಿ ಎಸ್.ನಾಗರಾಜು ಬಾಬು, ಪ್ರಾಂಶುಪಾಲ ಅಶ್ವಥ್ ನಾರಾಯಣ್, ದೈಹಿಕ ಶಿಕ್ಷಣ ಶಿಕ್ಷಕರಾದ ಸಿ.ನಾಗೇಂದ್ರ, ಸುನೀಲ್ ಕುಮಾರ್ ಸೇರಿದಂತೆ ಬೋಧಕ ವರ್ಗ ಅಭಿನಂದಿಸಿದೆ.

# CMA Foundation Clearance By the Students of 2022-23



ಸಿಎಂಎ ಪರೀಕ್ಷೆಯಲ್ಲಿ ತೇರ್ಗಡೆ... ಕೊಳ್ಳೇಗಾಲದ ವಾಸವಿ ಪ್ರಥಮ ದರ್ಜೆ ಕಾಲೇಜಿನ ನಾಲ್ಕು ವಿದ್ಯಾರ್ಥಿಗಳು ಸಿಎಂಎ ಫೌಂಡೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಬಿ.ಕಾಂ. ವ್ಯಾಸಂಗ ಮಾಡುತ್ತಿರುವ ಆರ್.ಸಿರೀಶ್ ಭಾರದ್ವಾಜ್, ಎಂ.ಜಯಶ್ರೀ, ಎನ್.ಸುರಭಿ ಹಾಗೂ ಎ.ಜಿ ದೀಪಾಶ್ರೀ ಅವರು ಕಳೆದ ತಿಂಗಳು ನಡೆದ ವೃತ್ತಿಪರ ಶಿಕ್ಷಣವಾದ ಸಿಎಂಎ ಫೌಂಡೇಷನ್ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿದ್ದಾರೆ. ಈ ವಿದ್ಯಾರ್ಥಿಗಳನ್ನು ವಾಸವಿ ವಿದ್ಯಾ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಸಹಕಾರ್ಯದರ್ಶಿಗಳು, ಪ್ರಾಂಶುಪಾಲರು ಹಾಗೂ ಬೋಧಕ ವೃಂದವರು ಅಭಿನಂದಿಸಿದ್ದಾರೆ.

Andolana Edition
Feb 13, 2023 Page No. 6
Powered by : eReleGo.com